ನಿಯಮ ೩೩ಳಿರ ಮೇರೆಗೆ

೧) ಮಂಟಿಕಾ, ಜೂಜು ಮತ್ತು ವಿಡಿಯೋ ಪ್ರದರ್ಶನದಿಂದ ಜನರಿಗೆ ಆಗುತ್ತಿರುವ ತೊಂದರೆ ಬಗ್ಗೆ

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬಸವ ಕಲ್ಯಾಣದಲ್ಲಿ ಮಂಟಿಕಾ ಜೂಜು ಮತ್ತು ವಿಡಿಯೋ ಪ್ರದರ್ಶನಗಳಿಗೆ ಅನುಮತಿ ಕೊಟ್ಟಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಎರಡು ವಿಡಿಯೋ ಪ್ರದರ್ಶನಗಳ ದಿನ ರಾತ್ರಿ ಅಶ್ಲೀಲ ಚಿತ್ರಗಳನ್ನು ತೋರಿಸಿ, ಇದರಿಂದ ಜನರ ಮೇಲೆ ಕೆಟ್ಟ ಪರಿಣಾಮ ಬೀರುವ ಕಾರಣದಿಂದ ಕೂಡಲೇ ವಿಡಿಯೋ ಪ್ರದರ್ಶನ ನಿಲ್ಲಿಸುವ ಸಲುವಾಗಿ ಮಾನ್ಯ ಮಂತ್ರಿಗಳು ಕ್ರಮ ಕೈಗೊಳ್ಳುವುದು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ವರದಿಯನ್ನು ತರಿಸಿಕೊಂಡು ಅದರ ಮೇಲೆ ಸೂಕ್ತ ಕ್ರಮ ಏನು ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

೨. ರಾಜ್ಯದ ಪಡಿತರ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್ತುಗಳ ಹಸ್ತಕ್ಷೇಪ ಹೆಚ್ಚಾಗಿರುವುದು.

ಶ್ರೀ ಮಂಜುನಾಥ ಸಿ. ಕುನ್ನೂರ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪಡಿತರ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್‌ಗಳ ಹಸ್ತಕ್ಷೇಪ ಹೆಚ್ಚಾಗಿದ್ದು ಸಾರ್ವಜನಿಕರಿಗೆ ಅನ್ಯಾಯವಾಗಿದ್ದು ಈ ಬಗ್ಗೆ ಮೇಲ್ಮನವಿ ಸಲ್ಲಿಸಲು ಸರ್ಕಾರ ಅವಕಾಶ ಕಲ್ಪಿಸಿ ಕೊಡಬೇಕೆಂ, ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳಲು ಸರ್ಕಾರದ ಗಮನ ಸೆಳೆಯಲಿಚ್ಛಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿ ಮತ್ತು ನ್ಯಾಯ ಪಂಚಾಯಿತಿ ಅಧಿನಿಯಮ ೧೩೫ ಅನ್ವಯ ಜಿಲ್ಲಾ ಪರಿಷತ್ತುಗಳು ಅಗತ್ಯ ವಸ್ತುಗಳ ವಿತರಣೆಯನ್ನು ಮಾಡಲು ಅಧಿಕಾರ ಹೊಂದಿದ್ದು, ಸರ್ಕಾರವು ಈ ಕಾರ್ಯವನ್ನು ಜಿಲ್ಲಾ ಪರಿಷತ್ತುಗಳಿಗೆ ೧-೪-೧೯೮೭ರಿಂದ ವಹಿಸಿ ಕೊಟ್ಟಿರುವುದು. ಇದರಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯನ್ವಯ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವ ಕಾರ್ಯವನ್ನು ಜಿಲ್ಲಾಪರಿಷತ್‌ಗಳು ನಿರ್ವಹಿಸುತ್ತಿವೆ. ಹೀಗೆ ವಿತರಣೆ ಮಾಡುವ ಕಾರ್ಯದಲ್ಲಿ ನ್ಯಾಯಬೆಲೆ ಅಂಗಡಿಗಳ ಮಂಜೂರಾತಿ ಮತ್ತು ಪ್ರಾಧಿಕಾರವನ್ನು ರದ್ದು ಪಡಿಸುವ ಅಧಿಕಾರವು ಜಿಲ್ಲಾ ಪರಿಷತ್‌ಗಳಿಗೆ ಇರುತ್ತದೆ.

ನ್ಯಾಯಬೆಲೆ ಅಂಗಡಿ ನಡೆಸಲು ನ್ಯಾಯಬೆಲೆ ಅಂಗಡಿ ಮಾಲೀಕರು ಜಿಲ್ಲಾ ಪರಿಷತ್ತಿನೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುವುದರಿಂದ, ಆ ಕರಾರು ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ವಿಚಾರಣೆ ನಡೆಸಿ ಪ್ರಾಧಿಕಾರವನ್ನು ಜಿಲ್ಲಾ ಪರಿಷತ್ತಿನವರು ವಜಾ ಮಾಡಲು ಕ್ರಮ ತೆಗೆದುಕೊಳ್ಳಬಹುದು. ಪ್ರಾಧಿಕಾರವು ಕರಾರು ಒಪ್ಪಂದವಾಗಿರುವುದರಿಂದ ಪ್ರಾಧಿಕರಣ ವಜಾ ಮಾಡಿರುವ ಬಗ್ಗೆ ಮೇಲ್ಮನವಿಯನ್ನು ಕೇವಲ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಬಹುದಾಗಿರುತ್ತದೆ ಎಂದು ಉಚ್ಚ ನ್ಯಾಯಾಲಯವು ಶ್ರೀ ಮಹದೇಶ್ವರ ಸ್ಟೋರ್ಸ್ ಮತ್ತು ಕರ್ನಾಟಕ ಸರ್ಕಾರದ ವಿರುದ್ಧದ ರಿಟ್ ಪೆಟಿಷನ್ ಸಂಖ್ಯೆ ೧೧೦೨೯/೮೭-೮ಲ್ಲಿ ಆದೇಶಿಸಿರುತ್ತದೆ.

ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಮೇಲ್ಮನವಿ ಸಲ್ಲಿಸುವ ಕಾರ್ಯ ವಿಧಾನವು ಸರ್ಕಾರದ ವ್ಯಾಪ್ತಿಗೆ ಬಾರದೇ ಇರುವುದರಿಂದ ಮತ್ತು ಸರ್ಕಾರವು ಈ ವಿಚಾರದಲ್ಲಿ ಸಮಗ್ರ ವಿಶ್ಲೇಷಣೆ ನಡೆಸಿ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಅಗತ್ಯ ವಸ್ತುಗಳ ಕಾಯಿದೆಯನ್ವಯ ಜಾರಿಗೊಳಿಸಲು ನಿಯಮಾವಳಿಯನ್ನು ತಯಾರು ಮಾಡಿ ಜಾರಿಗೆ ಕೊಡಲು ಉದ್ದೇಶಿಸಿದೆ. ಈ ನಿಯಮಾವಳಿಯನ್ನು ಜಾರಿಗೆ ಕೊಡುವ ಮುನ್ನ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಾಗಿರುವುದರಿಂದ ಆದಷ್ಟು ಜಾಗ್ರತೆ ಈ ನಿಯಮಾವಳಿಯನ್ನು ಜಾರಿ ಮಾಡುವ ಕಾರ್ಯ ಸರ್ಕಾರ ನಿರ್ವಹಿಸುತ್ತದೆ ಸದರೀ ನಿಯಮಾವಳಿಯಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರಾತಿ ಮಾಡುವ ಪ್ರಾಧಿಕಾರ ಹಾಗೂ ಅದರ ಸಂಬಂಧದಲ್ಲಿ ಮೇಲ್ಮನವಿ ಸಲ್ಲಿಸುವ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ.